ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 56/2016
ಡಿ.ಡಬ್ಲ್ಯೂ : 1

ದಿನಾಂಕಃ 16-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀ ಟಿ.ಬಿ.ಎಸ್. ವಕೀಲರಿಂದಃ

1. ಕಳೆದ ಬಾರಿ ನನ್ನ ಪಾಟೀ ಸವಾಲಿನಲ್ಲಿ ಬೇರೆ ಜಾಗಕ್ಕೆ ಸಂಬಂಧಪಟ್ಟಂತೆ ದಾನ ಪತ್ರ ಬರೆದುಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ದಿನಾಂಕ 22-12-1999 ರ ದಾನ ಪತ್ರವನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆ ಪತ್ರವನ್ನು ಒಪ್ಪಿ ಕೊಂಡ ಮೇರೆಗೆ ನಿ.ಪಿ.5 ಎಂದು ಗುರುತಿಸಲಾಯಿತು. ಸದರಿ ದಾನ ಪತ್ರದಲ್ಲಿ ನಮಗೆ ಭೂಮಿ ಬಂದಿದ್ದು ದಿನಾಂಕ 27-03-1985 ರಂದು ಆದಂತಹ ವಿಭಾಗ ಪತ್ರದ ಮೂಲಕ ಭೂಮಿ ಬಂದಿರುತ್ತದೆ ಎಂದು ಬರೆಯಿಸಿರುತ್ತೇನೆ ಎಂದರೆ ಸರಿ. ಆ ವಿಭಾಗ ಪತ್ರದಲ್ಲಿ ನಾನು ಸಹ ಪಕ್ಷಗಾರಳಾಗಿರುತ್ತೇನೆ. ದಿನಾಂಕ 27-03-1985 ರ ವಿಭಾಗ ಪತ್ರದಂತೆ ನನಗೆ ಪ್ರತ್ಯೇಕ ಪಾಲು ಪಟ್ಟಿ ಬಂದಿರುತ್ತದೆ ಎಂದರೆ ಸರಿ.

2. ದಿನಾಂಕ 27-03-1985 ರ ವಿಭಾಗ ಪತ್ರದಲ್ಲಿ ಎ ಶೆಡ್ಯೂಲ್ ಆಸ್ತಿ ಪುಟ್ಟಮ್ಮ ಶೆಡ್ತಿ, ಗಿರಿಜಮ್ಮ ಶೆಡ್ತಿ, ಶೇಖರ ಶೆಟ್ಟಿ, ಸಂಜೀವ ಶೆಟ್ಟಿ ಶ್ರೀಮತಿ ಶೆಡ್ತಿ, ರತ್ನಾಕರ ಶೆಟ್ಟಿ ಹಾಗೂ ಭಾಸ್ಕರ ಶೆಟ್ಟಿ ರವರ ಜಂಟಿ ಹಕ್ಕಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 27-03-1985 ರ ವಿಭಾಗ ಪತ್ರದಲ್ಲಿ ಪುಟ್ಟಮ್ಮ ಶೆಡ್ತಿಯವರು ಸಹ ಭಾಗಿಯಾಗಿದ್ದು, ದಾವಾ ಸ್ವತ್ತು ವಿಭಾಗ ಪತ್ರದ ಎ ಶೆಡ್ಯೂಲ್ ಸ್ವತ್ತು ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ.

3. ಪುಟ್ಟಮ್ಮ ಶೆಡ್ತಿಯವರಿಗೆ ದಾವಾ ಭೂಮಿಯ ಸಲುವಾಗಿ ವಿಲು ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 27-03-1985 ರ ವಿಭಾಗ ಪತ್ರ ಆದಾದ ನಂತರ ಪುಟ್ಟಮ್ಮ ಶೆಡ್ತಿಯವರು ಇನ್ನೊಂದು ವಿಭಾಗ ಪತ್ರ ಮಾಡಿಕೊಂಡಿದ್ದಾರಾ ಎಂದರೆ ಸಾಕ್ಷಿ ವಿಭಾಗ ಪತ್ರ ಮಾಡಿಕೊಂಡಿರುವುದಿಲ್ಲ, ದರ್ಕಾಸ್ತಿನಿಂದ ಬಂದ ಆಸ್ತಿಯನ್ನು ನಮಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಟ್ರಿಬುನಲ್ ನಲ್ಲಿ ಆದತಂಹ ಭೂಮಿ

ಸೇರಿಸಿ ದಿನಾಂಕ 27-03-1985 ರ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ಪಾಲು ಪಟ್ಟಿಯಲ್ಲಿ ಪುಟ್ಟಮ್ಮರವರಿಗೆ ಯಾವುದೇ ಪ್ರತ್ಯೇಕ ಭೂವಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಿಲ್ ಮಾಡುವಾಗ ನಾನು ಇದ್ದೆ. ನಾನು ಸಬ್ ರಿಜಿಸ್ಟರ್ ಕಚೇರಿಗೆ ಹೋಗಿರುವುದಿಲ್ಲ, ನನ್ನ ಗಂಡ ಹೋಗಿರುತ್ತಾರೆ. ನನ್ನ ಗಂಡ ಹೋಗಿ ವಿಲ್ ಪತ್ರ ಮಾಡಿಕೊಂಡು ಬಂದಿರುತ್ತಾರೆ. ವಿಲ್ ಪತ್ರ ಬರೆಯುವಾಗ ನಾನು ಇರಲಿಲ್ಲ. ಪುಟ್ಟಮ್ಮ ಶೆಡ್ತಿಯವರಿಗೆ ವಿಲು ಮಾಡುವಾಗ ಎಷ್ಟು ಪ್ರಾಯ ಇತ್ತು ಎಂದು ನೆನಪಿರುವುದಿಲ್ಲ. ಅದೇ ಜಾಗದಲ್ಲಿ ಅವರ ಮನೆಯಲ್ಲಿ ಗಂಡ, ಹೆಂಡತಿ ವಾಸ ಇದ್ದರು. ನನ್ನ ಒಟ್ಟಿಗೆ ಆಗ ಇರಲಿಲ್ಲ. ವಿಲ್ ಮಾಡುವಾಗ ಅವರ ಗಂಡ ಇದ್ದರು. ಅವರ ಗಂಡನ ಹೆಸರು ಮಹಾಬಲ ಯಾನೆ ಬಡಿಯಾ ಶೆಟ್ಟಿ ಅವರ ಗಂಡನಿಗೆ ವಿಲ್‌ನ ಬಗ್ಗೆ ಮಾಹಿತಿ ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

5. ವಿಲ್ ನ ಬಗ್ಗೆ ನನ್ನ ಗಂಡನಿಗೆ ಮಾತ್ರ ಮಾಹಿತಿ ಇತ್ತು. 1996 ರಲ್ಲಿ ಅವರು ವಿಲ್ ಮಾಡಿದ ಬಗ್ಗೆ ನನಗೆ ಗೊತ್ತಾಗಿರುತ್ತದೆ. 1995 ರಲ್ಲಿ ಅವರು ಮೃತ ಪಟ್ಟಿರುತ್ತಾರೆ. ನಮ್ಮ ಕುಟುಂಬದಲ್ಲಿ ತುಂಬಾ ಸಿವಿಲ್ ವ್ಯಾಜ್ಯ ಇರುತ್ತದೆ. ಈಗಲೂ ಸಹ ಸದರಿ ವ್ಯಾಜ್ಯಗಳು ಇತ್ಯರ್ಥಕ್ಕೆ ಇರುತ್ತದೆ. ಸುಮಾರು 7-8 ವ್ಯಾಜ್ಯಗಳು ನಮ್ಮ ಕುಟುಂಬದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಅದರಲ್ಲಿ 1 ಇತ್ಯರ್ಥ ಆಗಿರುತ್ತದೆ. ಸದರಿ ವ್ಯಾಜ್ಯಗಳನ್ನು ನಿಮ್ಮ ಗಂಡ ನೋಡಿಕೊಳ್ಳುತ್ತಿದ್ದಾರಾ ಎಂದರೆ ಸಾಕ್ಷಿ ಮೊದಲು ನನ್ನ ತಂದೆ ನೋಡಿಕೊಳ್ಳುತ್ತಿದ್ದರು, ನನ್ನ ತಂದೆ ಮೃತ ಪಟ್ಟ ನಂತರ ನನ್ನ ಗಂಡ ನೋಡಿಕೊಂಡಿದ್ದರು ಎಂದು ನುಡಿಯುತ್ತಾರೆ. ನಮ್ಮ ನಮ್ಮ ನಡುವೆ ಹಿರಿಯರ ಮುಖಾಂತರ ಪಂಚಾಯತಿ ಆಗಿರುತ್ತದೆ. ಆದರೆ ತೀರ್ಮಾನ ಆಗಿರುವುದಿಲ್ಲ. ಪುಟ್ಟಮ್ಮ ಶೆಡ್ತಿಯವರು ಯಾವುದೇ ವಿಲ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಕುಂದಾಪುರದಲ್ಲಿ ಟೈಪ್ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ